ನಮ್ಮ ಸರ್ಕಾರವು ದಿಕ್ಕೂಚಿ ಹಿಡಿದು ಕೆಲಸ ಮಾಡುತ್ತದೆಯೇ ಅಥವಾ ಇಲ್ಲವೆ ? ಸರ್ಕಾರಿ ನಾಮಕರಣ ಸದಸ್ಯರ ಮೂಲಕ ಸಹಕಾರಿ ಚಳುವಳಿ ಮುಂದುವರಿಸುತ್ತದೆಯೇ ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇದಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ರಾಜ್ಯದಲ್ಲಿ ಸಹಕಾರಿ ಸಮುದಾಯ ಬೇಸಾಯ ಸಂಘಗಳ ಸಂಖ್ಯೆ

63. ಶ್ರೀ ಇಳ್ಕಲ್ ವಿಜಯಕುಮಾರ (ಹೊಸದುರ್ಗ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಮುದಾಯ ಬೇಸಾಯ ಸಹಕಾರ ಸಂಘಗಳ ಸಂಖ್ಯೆ ಎಷ್ಟು ?

ಆ) ಸದರಿ ಸಂಘಗಳು ಕಾರ್ಯ ತತ್ಪರವಾಗಿವೆಯೇ ?

ಇ) ಹಾಗಿದ್ದಲ್ಲಿ, ಹೊಸದುರ್ಗ ತಾಲ್ಲೂಕಿನ ಮಧುರೆ ಕಣಿವೆ ಸಮುದಾಯ ಬೇಸಾಯ ಸಹಕಾರ ಸಂಘ ಕಾರ್ಯ ನಿರ್ವಹಿಸುತ್ತಿದೆಯೇ ?

ಈ) ಸದರಿ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಂಘದ ಸದಸ್ಯತ್ವ ನೀಡಲು ಇರುವ ತೊಂದರೆಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) 673.

ಆ) 1. ಕಾರ್ಯ ನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ – 236.

2. ಕಾರ್ಯ ತಟಸ್ಥವಾಗಿರುವ ಸಂಘಗಳ ಸಂಖ್ಯೆ – 241.

3. ಸಮಾಪನಗೊಂಡಿರುವ ಸಂಘಗಳ ಸಂಖ್ಯೆ – 196.

ಇ) ಹೌದು.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಸದಸ್ಯತ್ವ ನೀಡಲು ತೊಂದರೆಗಳ್ಯಾವೂ ಕಂಡು ಬಂದಿಲ್ಲ.

ಶ್ರೀ ಇಳ್ಕಲ್ ವಿಜಯಕುಮಾರ್:- ಮಾನ್ಯ ಸಭಾಧ್ಯಕ್ಷೀಣಿಯವರೆ, ಈ ಸೊಸೈಟಿ ಒಂದು ಮನೆತನದ ಸೊಸೈಟಿ ಆಗಿದೆ. ಇದು ಸುಮಾರು 1964ನೇ ಇಸವಿಯಲ್ಲಿ ಕೊಟ್ಟಂಥ ಸೊಸೈಟಿ. ಇದಕ್ಕೆ 5 ನೂರು ಎಕರೆ ಜಮೀನನ್ನು ಸರ್ಕಾರ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದೆ. ಇದು ಪ್ರತಿ ವರ್ಷವೂ ಲುಕ್ಸಾನಿನಲ್ಲಿ ನಡೆಯುತ್ತಿದೆ. ಲೆಕ್ಕಪತ್ರ ಕೂಡ ಸರಿಯಾಗಿಟ್ಟಿಲ್ಲ. 68 ಸದಸ್ಯರಲ್ಲಿ ಅರ್ಧದಷ್ಟು ಜನ ಊರು ಬಿಟ್ಟುಹೋಗಿದ್ದಾರೆ. ಕೆಲವರು ಸತ್ತು ಹೋಗಿದ್ದಾರೆ. ಆದರೂ ಕೂಡ ಈ ಸೊಸೈಟಿಗೆ ಇಷ್ಟೊಂದು ಜಮೀನು ಕೊಡತಕ್ಕಂಥ ಅವಶ್ಯಕತೆ ಇದೆಯೇ ? ಈ ಜಮೀನನ್ನು ಸರ್ಕಾರ ವಹಿಸಿಕೊಂಡು ಬಡಬಗ್ಗರಿಗೆ ಹಂಚಲಿಕ್ಕೆ ಏನಾದರೂ ತೊಂದರೆ ಇದೆಯೇ ಎಂದು ದಯವಿಟ್ಟು ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ನನ್ನ ಗಮನಕ್ಕೆ ತಂದಿದ್ದಾರೆ. ಮತ್ತು ನಾನು ಕೂಡ ಇದರ ಬಗ್ಗೆ ವಿವರಣೆಯನ್ನು ತರಿಸಿಕೊಂಡು ನೋಡಿದಾಗ ಈ ಸೊಸೈಟಿ ಏನೂ ಲಾಭದಲ್ಲಿ ಇಲ್ಲ. ಸುಮಾರು 25 ವರ್ಷಗಳ ಲೆಕ್ಕಪತ್ರವನ್ನು ನೋಡಿದರೆ ಆ ಸೊಸೈಟಿಯಿಂದ ಏನೂ ಲಾಭವಾಗಿಲ್ಲ

ಎನ್ನುವುದು ಗೊತ್ತಾಯಿತು. ಅವರು ಏನು ಕೇಳಿದ್ದಾರೆ ? ಈ ಸೊಸೈಟಿಗೆ ಕೊಟ್ಟಿರತಕ್ಕಂಥ ಜಮೀನು ಸುಮಾರು 500 ಎಕರೆ ಏನಿದೆ ಅದನ್ನು ಕ್ಯಾನ್ಸಲ್ ಮಾಡಿ ಎಂದು. ಈಗ್ಗೆ 25 ವರ್ಷ ಮುಗಿದಿರುವುದರಿಂದ ಮತ್ತೆ ರಿನ್ಯೂ ಮಾಡಬೇಕಾದ ಸಂದರ್ಭ ಬಂದಿದೆ. ಆ ಜಮೀನನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಹಂಚಿಕೆ ಮಾಡಬೇಕೆಂದು ಇದರ ಬಗ್ಗೆ ಅವರು ಮೊದಲೇ ಅರ್ಜಿ ಕೊಟ್ಟಿದ್ದರು. ಅದನ್ನು ರೆವಿನ್ಯೂ ಇಲಾಖೆಗೆ ಬರೆದು ಕಾನೂನು ಪ್ರಕಾರ ಯಾವ ರೀತಿ ಡಿಸ್ಪೋಸ್ ಮಾಡಬೇಕೋ ಆ ರೀತಿ ಮಾಡುವುದಕ್ಕೆ ಹೇಳುತ್ತೇನೆ.

ಉಪಾಧ್ಯಕ್ಷೀಣಿಯವರು:– ಶ್ರೀ ವಾಟಾಳ್ ನಾಗರಾಜ್‌ರವರು ಹಾಗೂ ಶ್ರೀ ಪೆರಿಕಲ್ ಮಲ್ಲಪ್ಪನವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಮಂತ್ರಿಗಳು ಸಮಯವನ್ನು ಕೇಳಿದ್ದಾರೆ. ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಉಪಾಧ್ಯಕ್ಷೀಣಿಯವರೇ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಜನವರಿ 6ನೇ ತಾರೀಖು ಬೆಳಿಗ್ಗೆ ಕೊಡುತ್ತಾರೆ ಎಂದು ತಿಳಿಸಬಯಸುತ್ತೇನೆ.

ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ

311. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೆವಿನ್ಯೂ ಸರ್ವೆ ಕಾರ್ಯ ಯಾವಾಗ ಮಾಡಲ್ಪಟ್ಟಿತ್ತು ಮತ್ತು ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ ಮಾಡುವ ಕಾರ್ಯವನ್ನು ಏಕಕಾಲದಲ್ಲಿ ಮಾಡುತ್ತದೆಯೆ ?

ಆ) ಕ್ರಮಬದ್ಧವಾದ ಕಂದಾಯ ನಿಗದಿಪಡಿಸಲು ಜಮೀನುಗಳ ಪುನರ್–ವರ್ಗೀಕರಣ ಮಾಡಲಾಗುತ್ತಿದೆಯೆ ?

ಇ) ಪಟ್ಟಣಗಳನ್ನು ಸರ್ವೆ ಮಾಡಲು ಯಾವುದಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ ?

ಈ) ನಗರ ಸಭೆ ಮತ್ತು ಪಟ್ಟಣ ಮಿತಿಯೊಳಗೆ ತುಂಡೀಕರಣ ನಿರ್ಬಂಧವಿದೆಯೇ ? ಮತ್ತು ಅಕ್ರಮ ಬೆಳವಣಿಗೆ ಹಾಗೂ ಅನಧಿಕೃತ ಕಟ್ಟಡವನ್ನು ನಿಯಂತ್ರಿಸಲು ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಲು ಉಪ–ನೋಂದಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಮೂಲ ಭೂಮಾಪನಾ ಕಾರ್ಯ 1863ರಿಂದ 1890ರ ಅವಧಿಯೊಳಗೆ ನಡೆಸಲಾಗಿದೆ. ಸಾಮಾನ್ಯವಾಗಿ ರೆವಿನ್ಯೂ ಸರ್ವೆ ಮತ್ತು ಕಂದಾಯ ನಿಗದಿ ಮಾಡುವ ಕಾರ್ಯವನ್ನು ಏಕ ಕಾಲದಲ್ಲಿ ಮಾಡಬೇಕಾಗುತ್ತದೆ.

ಆ) ಹೌದು.

ಇ) ಹೌದು.

ಈ) ಇಲ್ಲ.

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ಕ್ರಮಾಂಕ: ಹೆಚ್‌ಯುಡಿ:775:ಎಂಎನ್‌ಎಕ್ಸ್ 87 (ಭಾಗ) ದಿ: 27.9.1990ರಲ್ಲಿ ಹೊರಡಿಸಲಾದ ಆದೇಶದಲ್ಲಿ ಸೂಚನೆಗಳನ್ನು ನೀಡಿದೆ.